ಸಂಯುಕ್ತ ಕರ್ನಾಟಕ

# ಬಹುಮುಖ ಪ್ರತಿಭೆ ಈ ಹುಡುಗಿ



ಕ್ರೀಡೆ ಹಾಗೂ ಶಿಕ್ಷಣ ಎರಡನ್ನು ಉತ್ತಮವಾಗಿ ಸಾಧಿಸಬಹುದೇ ಎಂಬ ಅನೇಕರ ಪ್ರಶ್ನೆಗೆ ಜೈನ್ ಕಾಲೇಜಿನ ಅರ್ಚನ ಪೈ ಉದಾಹರಣೆಯಾಗಿ ನಿಂತಿದ್ದಾರೆ.

ಪ್ರಸಕ್ತ ವರ್ಷ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.98.5ರಷ್ಟು ಅಂಕ ಗಳಿಸಿದ್ದಾರೆ. ಇದರೊಂದಿಗೆ ರಾಷ್ಟ್ರೀಯ ಮಟ್ಟದ ಬ್ಯಾಟ್‌ಮಿಟನ್ ಸ್ಪರ್ಧೆಯಲ್ಲಿ ಒಂದು ಚಿನ್ನ ಹಾಗೂ ಎರಡು ಬೆಳ್ಳಿ ಪಡೆಯುವ ಮೂಲಕ ಶಿಕ್ಷಣ ಹಾಗೂ ಕ್ರೀಡೆ ಎರಡನ್ನು ಸಮಾನಾಗಿ ನಿಭಾಯಿಸಬಹುದು ಎಂದು ತೋರಿಸಿದ್ದಾರೆ.

ಜೈನ್ ಕಾಲೇಜಿನಲ್ಲಿ ವ್ಯಾಸ್ಯಾಂಗ ಮಾಡಿದ ಅರ್ಚನಾ, ಕ್ರೀಡೆ ಜೊತೆಯಲ್ಲಿ ವಿದ್ಯಾಭ್ಯಾಸದಲ್ಲಿಯೂ ಉತ್ತಮ ಸಾಧನೆ ಮಾಡೊರುವ ಅರ್ಚನಾಗೆ ಈ ಬಾರಿಯ ನಾಡಪ್ರಭು ಕೆಂಪೇಗೌಡ ಪ್ರಶಸ್ತಿಯೂ ಲಭಿಸಿದೆ. ತನ್ನ ಈ ಸಾಧನೆ ಬಗ್ಗೆ ಮಾತನಾಡಿರುವ ಅರ್ಚನಾ, ಪ್ರತಿನಿತ್ಯ ಐದಾರು ತಾಸು ಓದುತ್ತಿರಲಿಲ್ಲ. ಕೇವಲ ಒಂದೆರೆಡುಗಂಟೆ ಓದಿದ್ದೆ. ಇದರೊಂದಿಗೆ ಬ್ಯಾಡ್ಮಿಂಟನ್ ಅಭ್ಯಾಸ ನಡೆಸುತ್ತಿದೆ. ಜನವರಿ ನಂತರ ಓದಿನ ಕಡೆ ಹೆಚ್ಚು ಗಮನ ಹರಿಸಿದೆ. ಆದರೆ ಕಾಲೇಜಿನ ಅಧ್ಯಾಪಕರ ಹಾಗೂ ಪೋಷಕರ ನೆರವಿಲ್ಲದಿದ್ದರೆ ಈ ಸಾಧನೆ ಸಾಧ್ಯವಿರಲಿಲ್ಲ ಎಂದಿದ್ದಾಳೆ.